# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 999 |
| ಸದಸ್ಯರ ಹೆಸರು | ಶ್ರೀ ಎನ್ ರವಿಕುಮಾರ್ |
| ಉತ್ತರಿಸುವ ದಿನಾಂಕ | 22-12-2021 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿ ಎಷ್ಟು; ಜಿಲ್ಲಾವಾರು ದೇವಸ್ಥಾನವಾರು ವಿವರ ನೀಡುವುದು; ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು; | ಪ್ರಸ್ತುತ ರಾಜ್ಯದಲ್ಲಿರುವ ಮುಜರಾಯಿ ಇಲಾಖೆ ವ್ಯಾಪ್ತಿಗೊಳಪಟ್ಟ ಅಧಿಸೂಚಿತ ದೇವಾಲಯಗಳು ಹೊಂದಿರುವ ಆಸ್ತಿಗಳ ಜಿಲ್ಲಾವಾರು ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಸಿಡಿ ರೂಪದಲ್ಲಿ ಒದಗಿಸಲಾಗುವುದು.<br>ರಾಜ್ಯದ ಆಯಾಯ ಜಿಲ್ಲೆಯಲ್ಲಿನ ಅಧಿಸೂಚಿತ ದೇವಾಲಯದ ಸ್ವತ್ತುಗಳು ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ ಮಹಾನಗರಪಾಲಿಕೆ/ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ, ಸದರಿ ವ್ಯಾಪಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ (ಖಾಲಿಜಾಗ/ ನಿವೇಶನ/ ಕಟ್ಟಡ/ ಮಳಿಗೆಗಳು/ ಕಲ್ಯಾಣ ಮಂಟಪ/ ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ಧರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಿಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುವುದರಿಂದ, ಅಲ್ಲದೇ ಕಾಲಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆ ಯಾಗುವುದಿರಂದ ಧಾರ್ಮಿಕ ದತ್ತಿ ಇಲಾಖೆಯ ಬರುವ ಒಟ್ಟು 34563 ಮುಜರಾಯಿ ದೇವಾಲಯಗಳ 2021-22ನೇ ಸಾಲಿನ ಸ್ವತ್ತುಗಳ ನಿಖರ ಮೌಲ್ಯ ಕಲೆಹಾಕಲು ಸಾಧ್ಯವಾಗಿರುವುದಿಲ್ಲ.<br>ಅಧಿಸೂಚಿತ ದೇವಾಲಯಗಳಿಗೆ ಸೇರಿದ ಸ್ವತ್ತಿನ ಸ್ವಾಧೀನತೆ ಕುರಿತು ಅಳತೆ ಕಾರ್ಯ ಮತ್ತು ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. |
| ಆ | ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದುವರೆಗೆ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ/ಪಹಣಿ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಅಧಿಸೂಚಿತ ದೇವಾಲಯಗಳ ಸ್ಥಿರಾಸ್ತಿಯ ಸರ್ವೆ ಕಾರ್ಯವನ್ನು ಮಾಡಿ ಜಮೀನುಗಳ ದಾಖಲೆಗಳನ್ನು ನವೀಕರಿಸಿ ನಿರ್ವಹಿಸಲು ತಿಳಿಸಿ ಸರ್ಕಾರದ ಮುಖ್ಯ ಕಾರ್ಯದರ್ಶಿರವರು ದಿನಾಂಕ:11.12.2020ರ ಅರೆ ಸರ್ಕಾರಿ ಪತ್ರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ. ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ದಾಖಲೀಕರಣ ಮಾಡಿ, ಮಾಸಿಕ ಪ್ರಗತಿ ತಃಖ್ತೆಯಲ್ಲಿ ವರದಿಯನ್ನು ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರಿಗೆ ಕಡ್ಡಾಯವಾಗಿ ನೀಡುವಂತೆ ತಿಳಿಸಿರುತ್ತಾರೆ.<br>ಧಾರ್ಮಿಕ ದತ್ತಿ ಆಯುಕ್ತರ ಪತ್ರ ದಿನಾಂಕ:21.10.2020ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಬರೆಯಲಾದ ಪತ್ರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳು, ಛತ್ರಗಳು ಹಾಗೂ ಒಟ್ಟಾರೆ ಇಲಾಖೆಗೆ ಸೇರಿದ ಜಮೀನುಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನವೀಕರಿಸಿಕೊಂಡು ನಿರ್ವಹಿಸಬೇಕಾದ ಕುರಿತು ಕಂದಾಯ ವಿಭಾಗ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಧಾರ್ಮಿಕ ದತ್ತಿ ಇಲಾಖೆ, ಕಂದಾಯ ಇಲಾಖೆ ಹಾಗೂ ಭೂ ಮಾಪನಗಳ ಸಿಬ್ಬಂದಿ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಅಗತ್ಯ ನಡವಳಿಗಳ ಮುಖಾಂತರ ಅಧಿಸೂಚಿತ ದೇವಾಲಯಗಳ ಅಂತಿಮ ಕಂದಾಯ ದಾಖಲೆಗಳನ್ನು ತಯಾರಿಸಿ ನಿರ್ವಹಿಸುವ ಬಗ್ಗೆ ಕರ್ನಾಟಕ ಭೂ ಕಂದಾಯ |

ಅಧಿನಿಯಮ-1964 ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಇವುಗಳಲ್ಲಿ ಸೂಚಿತವಾಗಿರುವ ಅನ್ವಯವಾಗುವ ಅಧಿನಿಯಮ ಮತ್ತು ನಿಯಮಗಳ ಅನುಸಾರ ಕೆಲಸ ನಿರ್ವಹಿಸತಕ್ಕದ್ದು. ಅಂತಿಮ ದಾಖಲೆಗಳು ತಯಾರಾದ ನಂತರ ಅವುಗಳ ಪ್ರತಿಯನ್ನು ಆಯುಕ್ತರ ಕಛೇರಿಯ ದತ್ತಿ ಸಮೀಕ್ಷಾಧಿಕಾರಿಗಳಿಗೆ ಕಡ್ಡಾಯವಾಗಿ ಕಳುಹಿಸುವುದು ಎಂಬುದಾಗಿ ತಿಳಿಸಲಾಗಿರುತ್ತದೆ.

ದಿನಾಂಕ:16.11.2021ರಲ್ಲಿ ನಡೆದ ಸಭೆಯಲ್ಲಿ ಎಲ್ಲಾ ದೇವಾಲಯಗಳ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳ ಆಸ್ತಿಗಳ ಸರ್ವೆಕಾರ್ಯಗಳನ್ನು ಕೈಗೊಂಡು, ಹದ್ದುಬಸ್ತು ಗುರುತಿಸಿ, ಆರ್.ಟಿ.ಸಿ.ಯಲ್ಲಿ ದೇವಾಲಯದ ಹೆಸರನ್ನು ದಾಖಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿ ಮುಂದಿನ ಸಭೆಗೆ ಪ್ರಗತಿ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ನಿರ್ದೇಶನವನ್ನು ನೀಡಿ, ಈಗಾಗಲೇ ಸರ್ವೆ ಕಾರ್ಯ ಮುಗಿದ ಹಾಗೂ ಒತ್ತುವರಿ ಕಂಡು ಬಂದಿರುವ ದೇವಾಲಯಗಳ ಸ್ವತ್ತುಗಳ ಒತ್ತುವರಿಗಳನ್ನು ತೆರವುಗೊಳಿಸಲು ನಿಯಮಾನುಸಾರ ತ್ವರಿತ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳಲು ಸೂಚನೆಯನ್ನು ನೀಡಿರುತ್ತಾರೆ.

ರಾಜ್ಯದ ಎಲ್ಲಾ 227 ತಹಶೀಲ್ದಾರರುಗಳಿಗೆ ಪ್ರತ್ಯೇಕ ಪತ್ರಗಳನ್ನು ಬರೆದು 'ಸಿ' ದರ್ಜೆಯ ದೇವಾಲಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮಕೈಗೊಳ್ಳಲು ಕೋರಲಾಗಿದೆ.

ಸದರಿ ಪತ್ರದಲ್ಲಿ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ಇರುವ ಎಲ್ಲಾ ದೇವಾಲಯಗಳಿಗೆ ಸಂಬಂಧಿಸಿದ ಜಮೀನುಗಳ ಬಾಬ್ತು ಪಹಣಿಗಳು ದೇವರ ಹೆಸರಿನಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.ಇಲ್ಲವಾದಲ್ಲಿ ದೇವರ ಹೆಸರಿಗೆ ಪಹಣಿ ಮಾಡುವ ಬಗ್ಗೆ ಆದ್ಯತೆ ಮೇರೆಗೆ ನಿಯಮಾನುಸಾರ ಕ್ರಮ ಕೈಗೊಳ್ಳುವುದು.

"ಸಿ" ಪ್ರವರ್ಗದ ದೇವಾಲಯಗಳಿಗೆ ತಹಶೀಲ್ದಾರ್ ರವರುಗಳೇ ಕಾರ್ಯನಿರ್ವಾಹಣಾ ಅಧಿಕಾರಿಗಳು ಆಗಿರುವುದರಿಂದ ಇಂತಹ ದೇವಾಲಯಗಳ ಜಮೀನುಗಳಿಗೆ ಸಂಬಂಧಿಸಿದ ಪಹಣಿಗಳನ್ನು ಲಗತ್ತಿಸಿ, ಅಳತೆ ಬಗ್ಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪ್ರಸ್ತಾವನೆ ಕಳುಹಿಸುವುದು.

"ಎ" ಮತ್ತು "ಬಿ"ಶ್ರೇಣಿಯ ದೇವಾಲಯಗಳ ಬಾಬ್ತು ಸಂಬಂಧಿಸಿದ ಕಾರ್ಯನಿರ್ವಾಹಣಾಧಿಕಾರಿಗಳೊಂದಿಗೆ ಸಭೆ ನಡೆಸಿ, ಪಹಣಿಯನ್ನು ದೇವಾಲಯದ ಹೆಸರಿಗೆ ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರಿಗೆ ಅಳತೆ ಬಗ್ಗೆ ಅರ್ಜಿ ಸಲ್ಲಿಸಲು ಸೂಕ್ತ ಕ್ರಮ ವಹಿಸಲು ಕೋರಿದೆ.

ಅಧಿಸೂಚಿತ ದೇವಾಲಯಗಳಿಗೆ ಸೇರಿದ ಸ್ವತ್ತಿನ ಸ್ವಾಧೀನತೆ ಕುರಿತು ಅಳತೆ ಕಾರ್ಯ ಮತ್ತು ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

| | | |
|---|---|---|
| ೩) | ಮುಜರಾಯಿ ಇಲಾಖೆಯ ಒಟ್ಟು ಆದಾಯವೆಷ್ಟು; ಅದನ್ನು ಯಾವ ರೀತಿಯಲ್ಲಿ ವೆಚ್ಚ ಮಾಡ ಲಾಗುತ್ತಿದೆ; ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಎಷ್ಟು ದೇವಸ್ಥಾನಗಳನ್ನು ಕಳೆದ 3 ವರ್ಷಗಳಲ್ಲಿ ಜೀರ್ಣೋದ್ಧಾರ ಗೊಳಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಧಾರ್ಮಿಕ ದತ್ತಿ ಇಲಾಖೆ ಸೇರಿದ ಪ್ರವರ್ಗ "ಎ" ಮತ್ತು "ಬಿ" ದೇವಾಲಯಗಳಿಂದ ಕಳೆದ ಮೂರು ವರ್ಷಗಳಲ್ಲಿ ಬಂದ ಆದಾಯ ಮತ್ತು ವೆಚ್ಚದ ವಿವರ ಈ ಕೆಳಕಂಡಂತೆ ಇದೆ. |

| ಪ್ರವರ್ಗ | 2018-19 | | 2019-20 | | 2020-21 | |
|---|---|---|---|---|---|---|
| | ಆದಾಯ | ವೆಚ್ಚ | ಆದಾಯ | ವೆಚ್ಚ | ಆದಾಯ | ವೆಚ್ಚ |
| | ರೂ. ಲಕ್ಷಗಳಲ್ಲಿ | | ರೂ. ಲಕ್ಷಗಳಲ್ಲಿ | | ರೂ. ಲಕ್ಷಗಳಲ್ಲಿ | |
| "ಎ" | 48,942.18 | 38,985.63 | 50,478.79 | 38,583.57 | 33,201.14 | 28,197.15 |
| "ಬಿ" | 2,133.22 | 1,359.38 | 2160.97 | 1,416.68 | 1,446.88 | 965.69 |
| ಜಿಲ್ಲಾವಾರು ದೇವಾಲಯದ ಆದಾಯ ಮತ್ತು ವೆಚ್ಚ ವಿವರವನ್ನು ಅನುಬಂಧ-2A ರಲ್ಲಿ ಒದಗಿಸಿದೆ) | | | | | | |

ಪ್ರವರ್ಗ "ಸಿ" ದರ್ಜೆ ದೇವಾಲಯಗಳಿಗೆ ವಾರ್ಷಿಕ ಆದಾಯವು ತುಂಬಾ ಕಡಿಮೆಯಾಗಿರುತ್ತದೆ. ಈ ದೇವಾಲಯಗಳಿಗೆ ವಾರ್ಷಿಕ ರೂ.48,000-00ಗಳ ತಸ್ತೀಕ್/ ವರ್ಷಾಸನವನ್ನು ನಿಗಧಿಪಡಿಸಲಾಗಿರುತ್ತದೆ.

| | | |
|---|---|---|
| | | ಈ ಮೇಲ್ಕಂಡಂತೆ ಬರುವ ಆದಾಯವನ್ನು ಆಯಾಯ ದೇವಾಲಯಗಳಿಗೆ ಸಂಬಂಧಿಸಿದ ಖಾತೆಯಲ್ಲಿ ಸಂಗ್ರಹಿಸಿ, ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿವೆಚ್ಚ/ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ಬಳಸಲಾಗುತ್ತದೆ.<br>ಕಳೆದ 3 ವರ್ಷಗಳಲ್ಲಿ ರಾಜ್ಯದ ಮುಜರಾಯಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಒಟ್ಟು 710 ದೇವಸ್ಥಾನಗಳನ್ನು ಸರ್ಕಾರದ ಅನುದಾನದಲ್ಲಿ ಜೀರ್ಣೋದ್ಧಾರ ಗೊಳಿಸಲಾಗಿದೆ. |
| ಈ) | ಕಳೆದ 3 ವರ್ಷಗಳಲ್ಲಿ ದೇವಸ್ಥಾನದ ಆದಾಯದಲ್ಲಿ ಯಾವ ಯಾವ ಸಂಸ್ಥೆಗಳಿಗೆ ಸಹಾಯಧನ ವಿತರಿಸ ಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಅಧಿಸೂಚಿತ ದೇವಸ್ಥಾನದ ಆದಾಯದಲ್ಲಿ ಇತರೆ ಸಂಸ್ಥೆಗಳಿಗೆ ಸಹಾಯಧನ ರೂಪದಲ್ಲಿ ವಿತರಿಸಲು ಅವಕಾಶವಿರುವುದಿಲ್ಲ. |

ಸಂಖ್ಯೆ: ಕಂಇ 269 ಮುಸಪ್ರ 2021

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು